ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2015–16 : ದಿನಾಂಕ: 17–4–2015

## ಪತ್ರಿಕಾ ಆಮಂತ್ರಣ

| | | | |
|---|---|---|---|
| 1. | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ ಉದ್ಘಾಟನೆ:<br><br>ಉದ್ಘಾಟನೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br><br>ಉಪಸ್ಥಿತಿ:<br><br>ಶ್ರೀ ಆರ್. ವಿ. ದೇಶಪಾಂಡೆ,<br>ಉನ್ನತ ಶಿಕ್ಷಣ ಸಚಿವರು.<br><br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು,<br><br>ಅಧ್ಯಕ್ಷತೆ:<br><br>ಡಾ. ಹೆಚ್. ಮಹೇಶಪ್ಪ,<br>ಕುಲಪತಿಗಳು,<br>ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,<br>ಬೆಳಗಾವಿ. | **18-04-2015**<br>ಶನಿವಾರ<br>ಸಂಜೆ<br>4–00 ಗಂಟೆಗೆ | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ,<br>ಆರ್.ಹೆಚ್.ಸಿ.ಎಸ್. ಬಡಾವಣೆ,<br>ಅನ್ನಪೂರ್ಣೇಶ್ವರಿ ನಗರ,<br>ನಾಗರಬಾವಿ,<br>ಬೆಂಗಳೂರು – 560 091 |

ನಿರ್ದೇಶಕರ ಪರವಾಗಿ

ಪತ್ರಿಕಾ ಪ್ರಕಟಣೆ

## ಪತ್ರಿಕಾಗೋಷ್ಠಿ ಮುಂದೂಡಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ -2015 ರ ಸಾರ್ವತ್ರಿಕ ಚುನಾವಣೆ ಸಂಬಂಧ 17-4-2015 ರಂದು ಮಧ್ಯಾಹ್ನ 3-00 ಗಂಟೆಗೆ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯನ್ನು ಮುಂದೂಡಿ ದಿನಾಂಕ: 20-04-2015 ರಂದು ಸಾಯಂಕಾಲ 4-30 ಗಂಟೆಗೆ ರಾಜ್ಯ ಚುನಾವಣಾ ಆಯೋಗ ಕೆ.ಎಸ್.ಸಿ.ಎಂ.ಎಫ್. ಕಟ್ಟಡದ ಹಿಂಬಾಗ ನಂ. 8 ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು ಇಲ್ಲಿ ನಿಗದಿಪಡಿಸಿದೆ.

ಪಹೊ/ಸೌಮ್ಯ:ಕೆಎಂ

## ಕರ್ನಾಟಕ ವಿಧಾನ ಸಭೆ ಅಧಿವೇಶನ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಸಭೆಯ ಅಧಿವೇಶನವು ದಿನಾಂಕ 20-4-2015 ರಂದು ಬೆಳಿಗ್ಗೆ 11-00 ಗಂಟೆಗೆ ಬೆಂಗಳೂರಿನ ವಿಧಾನ ಸೌಧದದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸೇರಲಿದೆ ಎಂದು ಕರ್ನಾಟಕ ವಿಧಾನ ಸಭೆ ಕಾರ್ಯದರ್ಶಿ ಶ್ರೀ ಪಿ. ಓಂಪ್ರಕಾಶ ಅವರು ತಿಳಿಸಿದ್ದಾರೆ.

ಪಹೊ/ಬಾಬು/ಕೆಎಂ

## ಕರ್ನಾಟಕ ವಿಧಾನ ಪರಿಷತ್ ಅಧಿವೇಶನ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಪರಿಷತ್ತಿನ 128ನೇ ಅಧಿವೇಶನವು ದಿನಾಂಕ 20-4-2015 ರಂದು ಮಧ್ಯಾಹ್ನ 2-00 ಗಂಟೆಗೆ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಸಭೆ ಸೇರಲಿದೆ ಎಂದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿ ಶ್ರೀ ವಿ. ಶ್ರೀಶ್ ಅವರು ತಿಳಿಸಿದ್ದಾರೆ.

ಪಹೊ/ಬಾಬು/ಕೆಎಂ

## ಸರ್ಕಾರಿ ತಾಂತ್ರಿಕ ಶಾಲೆಗಳಲ್ಲಿ 8 ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ರಾಜ್ಯದ ವಿವಿಧ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ 2015-16 ನೇ ಸಾಲಿನ 8 ನೇ ತರಗತಿಗೆ ಪ್ರವೇಶ ಪಡೆಯಲಿಚ್ಛಿಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಬಳ್ಳಾರಿಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಾಗಲಕೋಟೆಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಭದ್ರಾವತಿ, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಕಲಬುರ್ಗಿ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಮಂಗಳೂರು ಹಾಗೂ ಹುಬ್ಬಳ್ಳಿಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲಗಳಲ್ಲಿ ಪ್ರವೇಶಕ್ಕಾಗಿ ಅರ್ಜಿ ಕರೆಯಲಾಗಿದೆ.

ಅಭ್ಯರ್ಥಿಯು ಕರ್ನಾಟಕ ಸರ್ಕಾರದಿಂದ ಅಂಗೀಕೃತವಾದ ಶಾಲೆಯಲ್ಲಿ 1ನೇ ತರಗತಿಯಿಂದ 7 ನೇ ತರಗತಿ ಅವಧಿಯಲ್ಲಿ ಕನಿಷ್ಟ 5 ವರ್ಷ ವ್ಯಾಸಂಗ ಮಾಡಿದ್ದು 7 ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

ಅರ್ಜಿಗಳನ್ನು ಮೇಲ್ಕಂಡ ಸಂಸ್ಥೆಗಳಲ್ಲಿ ದಿನಾಂಕ 22-04-2015 ರಿಂದ ದಿನಾಂಕ 15-05-2015 ರವರೆಗೆ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ : 15-05-2015 ರ ಸಂಜೆ 5-30 ರ ಒಳಗೆ ಸಂಬಂಧಿಸಿದ ಕಿರಿಯ ತಾಂತ್ರಿಕ ಶಾಲೆಗೆ ಸಲ್ಲಿಸಬಹುದಾಗಿದೆ.

ಪ್ರವೇಶಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಿನ್ಸಿಪಾಲರಿಂದ ಪಡೆಯಬಹುದಾಗಿದೆ.

ಪಹೊ:ಬಾಬು:ಜಿಪಿಆರ್.

## ಖಾಸಗಿ ತಾಂತ್ರಿಕ ಶಾಲೆಗಳಲ್ಲಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ರಾಜ್ಯದ ವಿವಿಧ ಖಾಸಗಿ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ 2015-16 ನೇ ಸಾಲಿನ 8 ನೇ ತರಗತಿಗೆ ಪ್ರವೇಶ ಪಡೆಯಲಿಚ್ಚಿಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶ್ರೀ ವಿಶ್ವಕರ್ಮ ಎಜುಕೇಶನಲ್ ಮತ್ತು ಕಲ್ಚರಲ್ ಟ್ರಸ್ಟ್. ಶ್ರೀ ಕಾಳಿಕಾಂಬ ಕಿರಿಯ ಪ್ರಾಥಮಿಕ ಶಾಲೆ, ಕಾರ್ಕಳ, ಉಡುಪಿ, ಬೆಳಗಾಂ ಇಂಟಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಕಿರಿಯ ತಾಂತ್ರಿಕ ಶಾಲೆ, ತುಕ್ಕಾನಹಟ್ಟಿ, ಗೋಕಾಕ್ ತಾಲ್ಲೂಕು, ಶ್ರೀ ರೇವಣಸಿದ್ದೇಶ್ವರ ಸೊಸೈಟಿ ಡಾ. ಎಂ.ಪಿ. ನಾಡಗೌಡ ಕಿರಿಯ ತಾಂತ್ರಿಕ ಶಾಲೆ, ಘಟಪ್ರಭ, ಗೋಕಾಕ್, ಪ್ರಗತಿ ಎಜುಕೇಶನ್ ಟ್ರಸ್ಟ್, ಕಿರಿಯ ತಾಂತ್ರಿಕ ಶಾಲೆ, ಕಂಪ್ಲಿ, ಬಳ್ಳಾರಿ ಜಿಲ್ಲೆ, ಶ್ರೀ ದುರ್ಗಾಮಾತಾ ವಿದ್ಯಾಸಂಸ್ಥೆ, ಕಿರಿಯ ತಾಂತ್ರಿಕ ಶಾಲೆ, ಹಿರೇಕೆರೂರು, (ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ) ಕೆ.ಎಸ್. ಗೌಡ ಎಜುಕೇಷನ್ ಟ್ರಸ್ಟ್ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.

ಅಭ್ಯರ್ಥಿಯು ಕರ್ನಾಟಕ ಸರ್ಕಾರದಿಂದ ಅಂಗೀಕೃತವಾದ ಶಾಲೆಯಲ್ಲಿ 1 ನೇ ತರಗತಿಯಿಂದ 7 ನೇ ತರಗತಿಯ ಅವಧಿಯಲ್ಲಿ ಕನಿಷ್ಠ 5 ವರ್ಷ ವ್ಯಾಸಂಗ ಮಾಡಿರಬೇಕು ಹಾಗೂ 7 ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

ಪ್ರವೇಶಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಖಾಸಗಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರಿಂದ ಪಡೆಯಬಹುದಾಗಿದೆ.

ಪಹೊ:ಬಾಬು:ಜಿಪಿಆರ್.

## ಜೀವ ವೈವಿಧ್ಯ ಕುರಿತಂತೆ ವಿವಿಧ ಸ್ಪರ್ಧೆಗಳು

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ಕರ್ನಾಟಕ ಜೀವ ವೈವಿಧ್ಯ ಮಂಡಳಿಯು ಅಂತರರಾಷ್ಟ್ರೀಯ ಜೀವ ವೈವಿಧ್ಯ ದಿನಾಚರಣೆಯ ಅಂಗವಾಗಿ ಮೇ 11 ರಂದು ಶಾಲಾ – ಕಾಲೇಜು ವಿದ್ಯಾರ್ಥಿಗಳಿಗಾಗಿ, ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹಾಗೂ ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸಿದೆ.

ಮೇ 11 ರಂದು ಬೆಳಿಗ್ಗೆ 10-00 ಗಂಟೆಗೆ ಬೆಂಗಳೂರಿನ ಮಲ್ಲೇಶ್ವರಂ 18ನೇ ಕ್ರಾಸ್‌ನ ಸರ್ಕಲ್ ಮಾರಮ್ಮ ದೇವಸ್ಥಾನ ಹತ್ತಿರವಿರುವ ಮಹಾರಾಣಿ ಅಮ್ಮಣ್ಣಿ ಕಾಲೇಜು ಆವರಣದಲ್ಲಿ ಸ್ಪರ್ಧೆಗಳು ನಡೆಯಲಿವೆ.

ವಿದ್ಯಾರ್ಥಿಗಳು ತಮ್ಮ ಪಾಲ್ಗೊಳ್ಳುವಿಕೆಯನ್ನು kbb.competition@gmail.com ಕ್ಕೆ ಮಿಂಚಂಚೆ ಮೂಲಕ ವಿವರಗಳೊಂದಿಗೆ ಮೇ 5 ರೊಳಗೆ ಕಳುಹಿಸಿ ಖಾತರಿಪಡಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗೆ ಕರ್ನಾಟಕ ಜೀವ ವೈವಿಧ್ಯ ಮಂಡಳಿ, ನೆಲಮಹಡಿ, ವನವಿಕಾಸ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. ದೂರವಾಣಿ ಸಂಖ್ಯೆ 080 – 23448783 ನ್ನು ಸಂಪರ್ಕಿಸಲು ಕೋರಿದೆ.

ಪಹೊ/ಬಾಬು:ಜಿಪಿಆರ್.

## ಸ್ಮಾರ್ಟ್ ನಗರಗಳ ಪರಿಕಲ್ಪನೆ ಜಾರಿಗೆ ಒತ್ತು ನೀಡಬೇಕಿದೆ

. ಸಚಿವ– ವಿನಯಕುಮಾರ ಸೊರಕೆ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ನಮ್ಮ ರಾಜ್ಯದಲ್ಲಿ ಸುಸ್ಥಿರ ಸ್ಮಾರ್ಟ್ ನಗರದ ಪರಿಕಲ್ಪನೆಯನ್ನು ಬೆಳೆಸಿ ಅವುಗಳನ್ನು ಶೀಘ್ರದಲ್ಲೇ ಅನುಷ್ಠಾನಗೊಳಿಸಲು, ಬೆಂಗಳೂರಿನ ಐಐಟಿ ಅಲುಮ್ನಿ ಸೆಂಟರ್ ಕಾರ್ಯನಿರ್ವಹಿಲಿದೆ ಎಂದು ನಗರಾಭಿವೃದ್ಧಿ ಸಚಿವ ವಿನಯ ಕುಮಾರ ಸೊರಕೆ ತಿಳಿಸಿದರು.

ಅವರು ಇಂದು ವಿಕಾಸ ಸೌಧದಲ್ಲಿ ನಡೆದ ಸ್ಮಾರ್ಟ್ ನಗರಕ್ಕಾಗಿ ನಗರ ಯೋಜನೆ ಕುರಿತ ಎರಡು ದಿನಗಳ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸ್ಮಾರ್ಟ್ ಸಿಟಿಗಳ ನಿರ್ಮಾಣದ ಬಗ್ಗೆ ಕೇಂದ್ರ ಸರ್ಕಾರ ಘೋಷಣೆ ಮಾಡಿ 1 ವರ್ಷ ಕಳೆದಿದೆ, ಸ್ಮಾರ್ಟ್‌ಸಿಟಿಗಳ ಪರಿಕಲ್ಪನೆ ಪರಿಪೂರ್ಣವಾಗಿ ರೂಪಿತವಾಗಿಲ್ಲ. ತನ್ನದೆ ಆದ ಒಂದು ಪರಿಕಲ್ಪನೆಯನ್ನು ರೂಪಿಸಲು ರಾಜ್ಯ ಸರ್ಕಾರವು ತಜ್ಞರ ಜತೆ ಈಗಾಗಲೇ ಮೂರು ಸಭೆ ಹಾಗೂ ಕಾರ್ಯಗಾರಗಳನ್ನು ನಡೆಸಿದೆ ಎಂದು ಹೇಳಿದರು.

ಪರಂಪರೆ ಜನಗರಗಳ ಮಾನದಂಡದ ಮೇಲೆ ಬಾದಾಮಿಯನ್ನು ಕೇಂದದ್ರ ಸರ್ಕಾರ ಆಯ್ಕೆ ಮಾಡಿದೆ. ಆದರೆ ರಾಜ್ಯ ಸರ್ಕಾರ ಹೊಸಪೇಟೆ, ಉಡುಪಿ ಹಾಗೂ ವಿಜಯಪುರವನ್ನು ಪಾರಂಪರಿಕ ನಗರಗಳನ್ನಾಗಿ ಅಭಿವೃದ್ಧಿ ಪಡಿಸುವಂತೆ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಿದೆ ಎಂದರು.

ಉಳಿದಂತೆ 50 ಲಕ್ಷ ಜನಸಂಖ್ಯೆಯ ಸ್ಮಾರ್ಟ್‌ಸಿಟಿ ನಿರ್ಮಾಣದಡಿ ರಾಮನಗರ, ದೇವನಹಳ್ಳಿ ಹಾಗೂ ತುಮಕೂರನ್ನು, 5 ರಿಂದ 10 ಲಕ್ಷ ಜನಸಂಖ್ಯೆ ಇರುವ ಮೈಸೂರು, ಹುಬ್ಬಳ್ಳಿ, ಧಾರವಾಡ, ಕಲ್ಬುರ್ಗಿ ನಗರಗಳನ್ನು ಸ್ಮಾರ್ಟ್ ನಗರಗಳನ್ನಾಗಿ ಆಯ್ಕೆ ಮಾಡಿ ಕೇಂದ್ರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ ಎಂದು ಹೇಳಿದರು.

ಸರ್ಕಾರವು ನಗರ ವಾಸಿಗಳಿಗೆ ಪರಿಹಾರ ತರುವ ಸ್ಮಾರ್ಟ್ ನಗರಗಳನ್ನು ಉಳಿಸಿಕೊಳ್ಳುವಲ್ಲಿ ಪ್ರಮುಖ ಯತ್ನ ನಡೆಸಿದೆ. ನಗರ ಪ್ರದೇಶದಲ್ಲಿ ವಾಸಿಸುವ ಜನರು ಇದರಿಂದ ಹೆಚ್ಚು ಸೌಲಭ್ಯವನ್ನು ಪಡೆಯಲು ಈ ಯೋಜನೆ ನೆರವಾಗಲಿದೆ ಎಂದು ಸಚಿವರು ತಿಳಿಸಿದರು.

ನಗರಗಳಲ್ಲಿ ನೀರನ್ನು ಮರು ಬಳಕೆ ಮಾಡುವ ನಿಟ್ಟಿನಲ್ಲಿ ಕೆಲಸಗಳಾಗಬೇಕಾಗಿದೆ. ಸ್ಮಾರ್ಟ್ ಸಿಟಿ ನಿರ್ಮಾಣದಲ್ಲಿ ಕೈಜೋಡಿಸಿರುವ ಐಐಟಿ ನೀರು ಪುರ್ನಬಳಕೆಯ ಕಡಿಮೆ ವೆಚ್ಚದ ಸಂಸ್ಕರಣ ಘಟಕಗಳನ್ನು ರೂಪಿಸುವ ಬಗ್ಗೆ ಹೆಚ್ಚು ಸಂಶೋಧನಗಳನ್ನು ನಡೆಸಬೇಕೆಂದು ತಿಳಿಸಿದರು.

ಸಮಾರಂಭದಲ್ಲಿ ಪೌರಾಡಳಿತ ಸಚಿವ ಖಮರುಲ್ ಇಸ್ಲಾಂ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀ ಕೌಶಿಕ್ ಮುಖರ್ಜಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದು, ಕರ್ನಾಟಕ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ನಿರ್ವಾಹಕ ನಿರ್ದೇಶಕ ಶ್ರೀ ದರ್ಪಣ್ ಜೈನ್, ಪೌರಾಡಳಿದ ಇಲಾಖೆಯ ನಿರ್ದೇಶಕರಾದ ಡಾ॥ ಮಂಜುಳಾ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಿ. ಸತ್ಯಮೂರ್ತಿ ಉಪಸ್ಥಿತರಿದ್ದರು.

ಪಹೊ/ಸೌಮ್ಯ/

## ನವ್ರೋದಯ ಶಾಲೆ : ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ಜವಾಹರ ನವೋದಯ ವಿದ್ಯಾಲಯ, ಬಾಗಲೂರು, ಬೆಂಗಳೂರು ನಗರ ಜಿಲ್ಲೆ 2015-16 ನೇ ಸಾಲಿನಲ್ಲಿ 9ನೇ ತರಗತಿಗೆ ಖಾಲಿ ಇರುವ 6 ಸೀಟುಗಳ ಭರ್ತಿಗಾಗಿ (ವಿವಿಧ ವರ್ಗಗಳ ಬಾಲಕ, ಬಾಲಕಿ, ನಗರ ಹಾಗೂ ಗ್ರಾಮೀಣ ಮೀಸಲಾತಿಯನ್ವಯ) ಅರ್ಜಿ ಆಹ್ವಾನಿಸಲಾಗಿದೆ.

ಭರ್ತಿಮಾಡಿದ ಅರ್ಜಿಗಳನ್ನು ನವೋದಯ ವಿದ್ಯಾಲಯಕ್ಕೆ ದಿನಾಂಕ 15-5-2015 ರೊಳಗಾಗಿ ಸಲ್ಲಿಸಬೇಕು. ದಿನಾಂಕ 7-6-2015 ರಂದು ಬೆಳಿಗ್ಗೆ 10-00 ಗಂಟೆಗೆ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದು.

ಪ್ರವೇಶ ಪರೀಕ್ಷೆಯ ಅರ್ಜಿಗಳನ್ನು ವಿದ್ಯಾಲಯದ ಕಚೇರಿಯಲ್ಲಿ ಅಥವಾ ವೆಬ್‌ಸೈಟ್ **www.navodayahyd.gov.in** ನಿಂದ ಪಡೆದುಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ವಿದ್ಯಾಲಯದ ದೂರವಾಣಿ ಸಂಖ್ಯೆ 080 – 28469055 ನ್ನು ಸಂಪರ್ಕಿಸಬಹುದು.

ಬಾಬು:ಜಿಪಿಆರ್

## ಸಚಿವರ ಪ್ರವಾಸ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ಪೌರಾಡಳಿತ ಹಾಗೂ ವಕ್ಫ್ ಖಾತೆ ಸಚಿವ ಡಾ. ಖಮರುಲ್ ಇಸ್ಲಾಂ ಅವರು ಏಪ್ರಿಲ್ 18 ಮತ್ತು 19 ರಂದು ಕಲಬುರಗಿ ಜಿಲ್ಲೆಯಲ್ಲಿ ಪ್ರವಾಸ ಮಾಡುವರು.

ಬಾಬು:ಜಿಪಿಆರ್.

## ಆಧಾರ್ ಕಾರ್ಡ್ ಸಲ್ಲಿಸಿ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಮೂಲಕ 2014-15 ರ ಶೈಕ್ಷಣಿಕ ವರ್ಷದಲ್ಲಿ ಪ್ರಧಾನ ಮಂತ್ರಿಗಳ ಶಿಷ್ಯ ವೇತನಕ್ಕಾಗಿ ಅರ್ಜಿ ಸಲ್ಲಿಸಿರುವ ಮಾಜಿ ಸೈನಿಕರ ಮಕ್ಕಳ ಬ್ಯಾಂಕ್ ಖಾತೆಯನ್ನು ಆಧಾರ್‌ಸಂಖ್ಯೆಯೊಂದಿಗೆ ಹೊಂದಿಸಲು ಆಧಾರ್ ಕಾರ್ಡ್ ಪ್ರತಿಯನ್ನು ದಿನಾಂಕ: 24-4-2015 ರೊಳಗಾಗಿ ಇಲಾಖೆಯ ಬೆಂಗಳೂರು ನಗರ ಜಿಲ್ಲಾ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ.

ಪಹೊ/ಬಾಬು/ಕೆಎಂ

# ಮೀನುಗಾರರಿಗೆ ಸಹಾಯಧನ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ಡೀಸೆಲ್ ಮೇಲಿನ ಮಾರಾಟ ಕರದಿಂದ ವಿನಾಯಿತಿ ನೀಡಬೇಕೆಂದು ಮೀನುಗಾರರು ಮಾಡಿಕೊಂಡಿರುವ ಮನವಿ ಹಿನ್ನಲೆಯಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಿನ 105 ಕೋಟಿ ರೂ.ಗಳ ಸಹಾಯಧನವನ್ನು ಮೀನುಗಾರರಿಗೆ ನೇರವಾಗಿ ನೀಡಲು ಸರ್ಕಾರ ನಿರ್ಧರಿಸಿದೆ ಎಂದು ಮೀನುಗಾರಿಕೆ ಸಚಿವ ಶ್ರೀ ಅಭಯ್ ಚಂದ್ರ ಜೈನ್ ಅವರು ತಿಳಿಸಿದರು. ಅವರು ಇಂದು ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ರಾಜ್ಯದಲ್ಲಿ ಸುಮಾರು 3700 ವಿವಿಧ ಯಾಂತ್ರಿಕ ದೋಣಿಗಳು ಇದರ ಪ್ರಯೋಜನವನ್ನು ಪಡೆಯುತ್ತಿದ್ದು ಈ ಸಂಖ್ಯೆ 4,000ಕ್ಕೆ ಏರಿಕೆಯಾಗಲಿದೆ ಎಂದರು.

ಆಗಸ್ಟ್ ತಿಂಗಳ ನಂತರ ಮೀನುಗಾರರ ಖಾತೆಗಳಿಗೆ ನೇರವಾಗಿ ಸಬ್ಸಿಡಿ ಹಣ ವರ್ಗಾವಣೆ ಪ್ರಕ್ರಿಯೆ ಜಾರಿಗೆ ಬರುತ್ತದೆ ಎಂದ ಅವರು ಕಳೆದ ವರ್ಷ ಮೀನುಗಾರರಿಗೆ 3,000 ಮನೆಗಳನ್ನು ನಿರ್ಮಿಸಿಕೊಡಲಾಗಿದ್ದು ಈ ಬಾರಿಯು 3000 ಮನೆಗಳನ್ನು ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ ಎಂದರು. ಮಂಗಳೂರಿನಲ್ಲಿ ಏಪ್ರಿಲ್ 30 ರಿಂದ ನಾಲ್ಕು ದಿನಗಳ ಕಾಲ ಅಖಿಲ ಭಾರತ ಅಥ್ಲೆಟಿಕ್ ಫೆಡರೇಷನ್ ಕಪ್ ಪಂದ್ಯಾವಳಿಯನ್ನು ಆಯೋಜಿಸಲಾಗಿದ್ದು ಇದಕ್ಕೆ ರಾಜ್ಯ ಸರ್ಕಾರ 1 ಕೋಟಿ ರೂ. ಮಂಜೂರು ಮಾಡಲಾಗಿದ್ದು 50.00 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ ಎಂದರು. ಈ ಕಾರ್ಯಕ್ರಮವನ್ನು ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಉದ್ಘಾಟನೆ ಮಾಡಲಿದ್ದು ಚಿತ್ರನಟ ಸುನೀಲ್ ಶೆಟ್ಟಿ ಭಾಗವಹಿಸಲಿದ್ದಾರೆಂದರು.

ಬೆಂಗಳೂರು ನಗರದ ಪ್ರವೀಣ್ ಎಂಬ ಯುವಕನಿಗೆ ಮೌಂಟ್ ಎವರೆಸ್ಟ್ ಶಿಖರ ಏರಲು 25.00 ಲಕ್ಷ ರೂ. ನೆರವು ನೀಡಲು ಸರ್ಕಾರ ನಿರ್ಧರಿಸಿದೆ ಎಂದ ಸಚಿವರು ಸಧ್ಯದಲ್ಲಿಯೇ ಹೊಸ ಕ್ರೀಡಾ ನೀತಿಯನ್ನು ಜಾರಿಗೆ ತರಲಾಗುವುದು ಎಂದರು.

ಪಹೊ/ಕೆಪಿಪಿ/ಕೆಎಂ

## ಲೋಕಾಯುಕ್ತ ನ್ಯಾಯಮೂರ್ತಿ ಡಾ: ವೈ ಭಾಸ್ಕರ್‌ರಾವ್ ಅವರ ಪರಿಷ್ಕೃತ ಪ್ರವಾಸ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ಲೋಕಾಯುಕ್ತ ನ್ಯಾಯಮೂರ್ತಿ ಡಾ: ವೈ. ಭಾಸ್ಕರ್‌ರಾವ್ ಅವರು 22-4-2015 ರಂದು ಸಂಜೆ ರಾಮನಗರಕ್ಕೆ ಆಗಮಿಸಿ, 23-4-2015 ರಂದು ಮಂಡ್ಯಕ್ಕೆ ತೆರಳುವರು.

ಪಹೊ/ಕೆಎಂ

# ಹಣಕಾಸು ನಿರ್ವಹಣೆ ಅಶಿಸ್ತು: ತನಿಖೆಗೆ ಸಮಿತಿ ನೇಮಕ

– ಸಚಿವ ಹೆಚ್.ಕೆ. ಪಾಟಿಲ್

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಹಣಕಾಸು ನಿರ್ವಹಣೆಯ ಅಶಿಸ್ತಿನ ಕುರಿತಂತೆ ತನಿಖೆ ನಡೆಸಲು ಕಾರ್ಯನಿರ್ವಾಹಕ ನಿರ್ದೇಶಕರು, ಗ್ರಾಮೀಣ ಇಂಧನ ಅಭಿವೃದ್ಧಿ ಸಂಸ್ಥೆಯ ಪುನಾಟಿ ಶ್ರೀಧರ್, ಅವರ ಅಧ್ಯಕ್ಷತೆಯ ನಾಲ್ವರ ಸಮಿತಿಗೆ ಅನುದಾನವನ್ನು ಹಲವಾರು ಬ್ಯಾಂಕುಗಳು ಹಾಗೂ ಇತರೆ ಸಂಸ್ಥೆಗಳಲ್ಲಿ ಠೇವಣಿ ಇಟ್ಟಿರುವ ಬಗ್ಗೆ ತಪಾಸಣೆ ಮಾಡಿ ಸರ್ಕಾರಕ್ಕೆ ಒಂದು ತಿಂಗಳಲ್ಲಿ ವರದಿ ನೀಡುವಂತೆ ಸೂಚಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ ಹೆಚ್.ಕೆ. ಪಾಟೀಲ್ ಅವರು ತಿಳಿಸಿದರು.

ಇಂದು ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಸಚಿವರು 13 ನೇ ಹಣಕಾಸು ಆಯೋಗದ ಅವಧಿಯಲ್ಲಿ ಒಟ್ಟು 525 ಕೋಟಿ ರೂ.ಗಳಷ್ಟು ಇಲಾಖೆಯ ಹಣ ಬೇರೆ ಬೇರೆ ಬ್ಯಾಂಕುಗಳಲ್ಲಿ ಠೇವಣಿ ಇಟ್ಟಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ ಎಂದ ಅವರು ಇಲಾಖೆಯಲ್ಲಿನ ಆರ್ಥಿಕ ಅಶಿಸ್ತನ್ನು ತೊಡೆದು ಹಾಕಲು 13 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರಲು ಇಲಾಖೆಗೆ ಸೂಚನೆ ನೀಡಲಾಗಿದೆ ಎಂದರು.

ಇನ್ನು ಮುಂದೆ ಹಣಕಾಸು ನಿರ್ವಹಣೆ ಹಾಗೂ ವರ್ಗಾವಣೆ ವಿಚಾರದಲ್ಲಿ ಬಹುಸಹಿ ಪದ್ಧತಿ ಕಡ್ಡಾಯವಾಗಿ ಜಾರಿಗೆ ಬರಲಿದೆ ಎಂದು ಸಚಿವರು ತಿಳಿಸಿದರು.

ಪಹೊ/ಕೆಪಿಪಿ/ಕೆಎಂ

## <u>Over 2.67 lakh candidates to write K.A.S, Exam</u>

**<u>Bangalore, April 17, Karnataka Varthe:</u>**

Karnataka Public Service Commission is conducting Priliminary exams for the Gazetted Probationers 2014 on 19-04-2015 for 440 posts, mainly for the posts of Assistant Commissioners (Revenue), Deputy Superintendent of Police, Assistant Commissioner (Commercial Taxes), Tahsildar, etc. said R.Venkatesh Kumar Controller of Examinations, Karnataka Public Service Commission.

1. The Exam is conducted in 12 Centres (10 districts and 2 Taluks.)
2. In all 2,67,472 candidates are taking the examination in 625 sub-centres .
3. Frisking has been introduced for the first time and all the candidates are advised to carry only Admission Tickets and Pens to the Examination Halls.
4. Around 125 Class-I Officers are appointed as Flying Squads to ensure fair conduct of the Examinations without malpractices.

5. Around 45 Senior I.A.S/I.P.S/I.F.S/K.A.S Officers are appointed as Observers throughout the State to monitor the peaceful and fair conduct of the Examinations.
6. Deputy Commissioners of the Districts are conducting the Examinations in their respective districts with the help of JDPI/DDPI's and BEO's.
7. All examination centres are videographed to ensure fair conduct of the examinations.
8. Police security is provided at each venue of the Examination throughout the State.
9. The Commission advises the candidates not to carry mobile phones, electronic gadgets such as Bluetooth, etc as candidates found in possession of mobile phones, etc will be debarred from examinations. Therefore candidates should carry only Admission Tickets and Pens to the Examination Halls to avoid any penalties.
10. After conclusion of exam, candidates can give their feedback either in writing or through e-mail (kpsc-ka@nic.in)

## ಕೆ.ಎ.ಎಸ್. ಪರೀಕ್ಷೆಗೆ 2.65 ಲಕ್ಷ ಅಭ್ಯರ್ಥಿಗಳು

**ಬೆಂಗಳೂರು, ಏಪ್ರಿಲ್ 17 (ಕರ್ನಾಟಕ ವಾರ್ತೆ)**

**ಕರ್ನಾಟಕ ಲೋಕಸೇವಾ ಆಯೋಗವು 440 ಗೆಝೆಟೆಡ್ ಪ್ರೊಬೇಷನರ್ಸ್ ಹುದ್ದೆಗಳಿಗೆ ದಿನಾಂಕ: 19–04–2015 ರಂದು ಪೂರ್ವಭಾವಿ ಪರೀಕ್ಷೆಯನ್ನು ನಡೆಸಲಿದೆ. ಪ್ರಮುಖವಾಗಿ ಸಹಾಯಕ ಆಯುಕ್ತರು (ಕಂದಾಯ), ಸಹಾಯಕ ಆಯುಕ್ತರು (ವಾಣಿಜ್ಯ ತೆರಿಗೆ ಇಲಾಖೆ), ತಹಸೀಲ್ದಾರ್ ಗ್ರೇಡ್–2, ಇತರೆ ಹುದ್ದೆಗಳಿಗೆ ಪರೀಕ್ಷೆ ನಡೆಸಲಾಗುತ್ತಿದೆ.**

1. **ಪರೀಕ್ಷೆಯನ್ನು 10 ಜಿಲ್ಲಾ ಕೇಂದ್ರಗಳು ಮತ್ತು 02 ತಾಲ್ಲೂಕು ಕೇಂದ್ರಗಳನ್ನು ಒಳಗೊಂಡಂತೆ ಒಟ್ಟು 12 ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ.**
2. **ಒಟ್ಟು 2,67,472 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದು, 625 ಪರೀಕ್ಷಾ ಉಪಕೇಂದ್ರಗಳಲ್ಲಿ ನಡೆಸಲಾಗುತ್ತಿದೆ.**
3. **ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ತಮ್ಮ ಪ್ರವೇಶ ಪತ್ರ ಮತ್ತು ಪೆನ್‌ನ್ನು ಮಾತ್ರ ತೆಗೆದುಕೊಂಡು ಹೋಗತಕ್ಕದ್ದು. ಪ್ರಪ್ರಥಮ ಬಾರಿಗೆ ಅಭ್ಯರ್ಥಿಗಳನ್ನು ಪರೀಕ್ಷಾ ಕೊಠಡಿಯೊಳಗೆ ಹೋಗುವ ಮೊದಲು ಪರಿಶೀಲನೆ ನಡೆಸಲಾಗುವ ಪ್ರಕ್ರಿಯೆಯನ್ನು ಪರಿಚಯಿಸಲಾಗಿದೆ.**

4. ಪರೀಕ್ಷೆಯು ಶಾಂತಿಯುತವಾಗಿ ಮತ್ತು ಸುಗಮವಾಗಿ ನಡೆಯುವ ಸಂಬಂಧ ಹಾಗೂ ಪರೀಕ್ಷಾ ಅವ್ಯವಹಾರಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯದ ಸುಮಾರು 125 ಗ್ರೂಪ್–ಎ ಹಿರಿಯ ಶ್ರೇಣಿ ಅಧಿಕಾರಿಗಳನ್ನು ಫ್ಲೈಯಿಂಗ್ ಸ್ಕ್ವಾಡ್ ಆಗಿ ನಿಯೋಜಿಸಲಾಗಿದೆ.
5. ಪರೀಕ್ಷೆಗಳು ರಾಜ್ಯಾದ್ಯಂತ ಸುಲಲಿತವಾಗಿ ನಡೆಯುವ ಸಂಬಂಧ ಸುಮಾರು 45 ಐ.ಎ.ಎಸ್/ಐ.ಪಿ.ಎಸ್/ ಐ.ಎಫ್.ಎಸ್/ಐ.ಆರ್.ಎಸ್./ಕೆ.ಎ.ಎಸ್ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನಿಯೋಜಿಸಲಾಗಿರುತ್ತದೆ.
6. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಇವರಿಗೆ ಪರೀಕ್ಷಾ ಕಾರ್ಯಗಳಲ್ಲಿ ನೆರವಾಗಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರು/ ಉಪನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ನಿಯೋಜಿಸಲಾಗಿರುತ್ತದೆ.
7. ಪ್ರತಿ ಪರೀಕ್ಷಾ ಉಪಕೇಂದ್ರಗಳಲ್ಲಿ ಪರೀಕ್ಷೆಯು ಸುಗಮವಾಗಿ ನಡೆಸುವ ಸಂಬಂಧ ವಿಡಿಯೋ ಚಿತ್ರೀಕರಣವನ್ನು ನಡೆಸಲಾಗುತ್ತಿದೆ.
8. ರಾಜ್ಯದ ಪ್ರತಿ ಪರೀಕ್ಷಾ ಉಪಕೇಂದ್ರಗಳಲ್ಲಿಯೂ ಸಹ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.
9. ಆಯೋಗವು ಯಾವುದೇ ಅಭ್ಯರ್ಥಿಯು ಪರೀಕ್ಷಾ ಉಪಕೇಂದ್ರದ ಆವರಣದೊಳಗೆ ಮೊಬೈಲ್ ಫೋನ್, ಎಲೆಕ್ಟ್ರಾನಿಕ್ ಉಪಕರಣಗಳು, ಬ್ಲೂಟೂತ್ ಡಿವೈಸ್‌ಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಿದೆ. ಯಾವುದೇ ಅಭ್ಯರ್ಥಿಯು ಮೊಬೈಲ್ ಫೋನ್, ಇತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಹೊಂದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಆಯೋಗವು ನಡೆಸುವ ಎಲ್ಲಾ ಪರೀಕ್ಷೆಗಳಿಂದ ಡಿಬಾರ್ ಮಾಡಲಾಗುವುದು. ಆದುದರಿಂದ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯೊಳಗೆ ತಮ್ಮೊಂದಿಗೆ ಪ್ರವೇಶ ಪತ್ರ ಮತ್ತು ಪೆನ್‌ನ್ನು ಮಾತ್ರ ತೆಗೆದುಕೊಂಡು ಹೋಗತಕ್ಕದ್ದು.
10. ಅಭ್ಯರ್ಥಿಗಳು ಪರೀಕ್ಷೆ ಮುಗಿದ ನಂತರ ತಮ್ಮ ಪ್ರತಿಕ್ರಿಯೆಯನ್ನು ಲಿಖಿತವಾಗಿ ಅಥವಾ ಮಿಂಚಂಚೆ (kpsc-ka@nic.in) ಮುಖಾಂತರ ತಿಳಿಸಬಹುದಾಗಿರುತ್ತದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪರೀಕ್ಷಾ ನಿಯಂತ್ರಕರಾದ ಆರ್.ವೆಂಕಟೇಶ್ ಕುಮಾರ್ ತಿಳಿಸಿದ್ದಾರೆ.

## ADMISSION IN CLASS IX AGAINST VACANT SEATS

Bangalore, April 17(Karnataka Information)

Applications are invited for admission of students to class IX (against the 06 vacant seats of different categories of Boys & Girls of Rural & Urban) in Jawahar Navodaya Vidyalaya, Bagalur, Bangalore Urban District for the academic year 2015-16.

Applications may be submitted to the Principal, Jawahar Navodaya Vidyalaya, Bagalur on or before 15.05.2015. Written test admisstions will be held on 07.06.2015 at 10.00 a.m.

Application forms can be collected from the Principal of Jawahar Navodaya Vidyalaya or can be download from the website www.navodayahyd.gov.in.

For further details contact Vidyalaya on Phone no-080 28469055

ph/km

## ಭರದಲ್ಲಿ ಸಾಗುತ್ತಿರುವ ಸಮೀಕ್ಷೆ ಕಾರ್ಯ:

–ಸಚಿವ ಆಂಜನೇಯ

ಬೆಂಗಳೂರು ಏಪ್ರಿಲ್ 17 (ಕರ್ನಾಟಕ ವಾರ್ತೆ)

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕುರಿತಂತೆ ಏಪ್ರಿಲ್ 11 ರಿಂದ ಆರಂಭವಾಗಿರುವ ಸಮೀಕ್ಷಾ ಕಾರ್ಯದಲ್ಲಿ ಈವರೆಗೆ 8 ಲಕ್ಷ ಕುಟುಂಬಗಳ ಸದಸ್ಯರ ಸಮೀಕ್ಷೆ ನಡೆಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ತಿಳಿಸಿದರು.

ಅವರು ಇಂದು ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಕುರಿತಂತೆ ಪ್ರತಿನಿತ್ಯ ಸುಮಾರು 500 ಕ್ಕೂ ಹೆಚ್ಚು ದೂರುಗಳು ಬರುತ್ತಿದ್ದು ಸಮಪರ್ಕಕವಾಗಿ ಉತ್ತರ ನೀಡಲಾಗುತ್ತಿದೆ ಎಂದರು.

ಸಹಾಯವಾಣಿ ಬಂದ ಬಳಿಕ ಹಲವಾರು ಸಾರ್ವಜನಿಕರು ಮಾಹಿತಿಗಳನ್ನು ಕೇಳುತ್ತಿದ್ದು ಅವರ ಎಲ್ಲ ಸಮಸ್ಯೆಗಳಿಗೆ ಸಮರ್ಪಕವಾಗಿ ಉತ್ತರ ಒದಗಿಸಲಾಗುತ್ತಿದೆ ಎಂದರು. ಸಮೀಕ್ಷೆ ಆರಂಭದಲ್ಲಿ ಸಣ್ಣ ಪುಟ್ಟ ತೊಂದರೆಗಳು ಹಾಗೂ ಗೊಂದಲಗಳು ಇದ್ದವು. ಅವುಗಳನ್ನು ಈಗ ಸರಿಪಡಿಸಲಾಗಿದೆ ಎಂದರು.

ಗಣತಿದಾರರು ಸಂಗ್ರಹಿಸಿರುವ ಎಲ್ಲ ಮಾಹಿತಿಯನ್ನು ಮರು ಪರಿಶೀಲನೆ ಮಾಡಿ ಸರಿಯಾದ ಮಾಹಿತಿಯನ್ನು ಅಂತಿಮ ಪಟ್ಟಿಯಲ್ಲಿ ನಮೂದನೆ ಮಾಡಲಾಗುವುದು ಎಂದರು. ಪರಿಶಿಷ್ಟ ಜಾತಿಯಲ್ಲಿ 180 ಉಪ ಜಾತಿಗಳು, ಪರಿಶಿಷ್ಟ ಪಂಗಡದಲ್ಲಿ 105 ಉಪ ಪಂಗಡಗಳಿದ್ದು ಅವುಗಳಿಗೆ ಸಂಬಂಧಪಟ್ಟಂತೆ ಕೋಡ್‌ಗಳನ್ನು ನೀಡಲಾಗಿದೆ. ಗಣತಿದಾರರು ಈ ಕೋಡ್‌ಗಳನ್ನು ಸರಿಯಾಗಿ ಅರ್ಜಿಯಲ್ಲಿ ದಾಖಲಿಸುವಂತೆ ಸೂಚಿಸಲಾಗಿದೆ ಎಂದರು.

ಅರ್ಜಿಗಳನ್ನು ಪೆನ್ಸಿಲ್‌ನಿಂದ ಭರ್ತಿ ಮಾಡಬಾರದು ಎಂದ ಸಚಿವರು ಮಾಹಿತಿಗಳನ್ನು ಪೆನ್ನಿನಿಂದಲೆ ದಾಖಲಿಸಬೇಕು ಮತ್ತು ಮಾಹಿತಿದಾರರಿಂದ ಕಡ್ಡಾಯವಾಗಿ ಸಹಿ ಪಡೆಯಲು ಗಣತಿದಾರರಿಗೆ ಸೂಚಿಸಲಾಗಿದೆ ಎಂದರು.

**ಪಹೊ/ಕೆಪಿಪಿ/ಕೆಎಂ**